ಹೇಮಾವತಿ ನೀರು ಸೋರಿಕೆಯಿಂದ ಮಂಚೇನಹಳ್ಳಿ ಕೆರೆ ಹಿಂಭಾಗದ ರಸ್ತೆ ಕುಸಿದಿರುವುದು

1243 (1321) ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಅಮ್ಮಸಂದ್ರಕ್ಕೆ ಹೋಗುವ ಮಂಚೇನಹಳ್ಳಿ ಕೆರೆ ಹಿಂಭಾಗದ ರಸ್ತೆಯು ಹೇಮಾವತಿ ನೀರಿನಿಂದ ಕೆರೆ ಸೋರಿಕೆಯಾಗಿ ರಸ್ತೆ ಹಾಳಾಗಿರುವುದು ಹಾಗೂ ಸೇತುವೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು;

ಇ) ಎಷ್ಟು ದಿನಗಳಲ್ಲಿ ರಿಪೇರಿ ಮಾಡಲಾಗುವುದು?

ಶ್ರೀ ಎಚ್. ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಇಲ್ಲ

ತುರುವೇಕೆರೆ ಅಮ್ಮಸಂದ್ರ ಮಾರ್ಗದಲ್ಲಿ ಮಂಚೇನಹಳ್ಳಿ ಕೆರೆಯು ಇರುವುದಿಲ್ಲ. ತುರುವೇಕೆರೆ ಅಮ್ಮಸಂದ್ರ ರಸ್ತೆಯಲ್ಲಿ ಮಾಚೇನಹಳ್ಳಿ ಗ್ರಾಮದ ಸಮೀಪ ಸಾರಿಗೆಹಳ್ಳ ಕೆರೆಯು ಇರುತ್ತದೆ. ಈ ಕೆರೆಯ ಬಸಿ ನೀರು ಬಸಿಗಾಲುವೆ ಮೂಲಕ ಹಳ್ಳಕ್ಕೆ ಹರಿಯುತ್ತದೆ. ಈ ಬಸಿ ನೀರಿನಿಂದ ರಸ್ತೆಯು ಹಾಳಾಗಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿನ ಡೊಂಕಿಹಳ್ಳಿ ಕೆರೆಗೆ 20 ವರ್ಷಗಳಿಂದ ಚಾನಲ್‌ಗಳೂ ರಿಪೇರಿಯಾಗದೆ ಇರುವುದು

1244 (1323) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಡೊಂಕಿಹಳ್ಳಿ ಕೆರೆ ಪ್ರತಿ ವರ್ಷ ತುಂಬುತ್ತಿದ್ದು ಕೆರೆಗೆ ತೂಬು ಹಾಗೂ ಚಾನೆಲ್‌ಗಳು ರಿಪೇರಿಯಾಗದೇ ಸುಮಾರು 20 ವರ್ಷಗಳಿಂದ ರೈತರು ಬೆಳೆ ಬೆಳೆಯದೆ ಸುಮಾರು 900 ಎಕರೆ ಪ್ರದೇಶದ ಜನರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಷ್ಟೆಲ್ಲಾ ಅನ್ಯಾಯವಾಗಿರುವುದು ಕಂಡು ಬಂದರೂ ಗ್ರಾಮಾಂತರ ಜನರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ವಿಫಲವಾಗಿದೆಯೆ;

ಇ) ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಲು ಸರ್ಕಾರ ವ್ಯವಸ್ಥೆ ಮಾಡಲಿದೆಯೆ;

ಈ) ಎಷ್ಟು ದಿನಗಳಲ್ಲಿ ಕೆಲಸ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ಡೊಂಕಿಹಳ್ಳಿ ಅಣೆಯ ಅಚ್ಚುಕಟ್ಟು 291 ಹೆಕ್ಟೇರ್ ಅಥವಾ 719 ಎಕರೆಯಿರುತ್ತದೆ. 1997 ರ ವರೆಗೆ ಸದರಿ ಅಣೆಯಲ್ಲಿ ನೀರು ಶೇಖರಣೆಯಾಗುತ್ತಿರಲಿಲ್ಲ. ಕಳೆದ ಮೂರ್ನಾಲ್ಕು ವರ್ಷಗಳಿಂದ ಈ ಅಣೆಯು ತುಂಬುತ್ತಿದ್ದು, 1997 ರಲ್ಲಿ ಲೋಕೋಪಯೋಗಿ ಉಪ ವಿಭಾಗದಿಂದ ಸಣ್ಣ ನೀರಾವರಿ ಉಪ ವಿಭಾಗಕ್ಕೆ ವರ್ಗಾವಣೆಯಾದಾಗ ತೂಬು ಮತ್ತು ಚಾನಲ್‌ಗಳು ಸುಸ್ಥಿತಿಯಲ್ಲಿಲ್ಲದ್ದನ್ನು ಗಮನಿಸಲಾಗಿದೆ.

ಆ) 1999-2000ನೇ ಸಾಲಿನಲ್ಲಿ ರೂ. 3.00 ಲಕ್ಷ ಅಂದಾಜು ಮೊತ್ತದ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. 2000-01ನೇ ಸಾಲಿನಲ್ಲಿ ಇದೇ ಯೋಜನೆಗಾಗಿ ರೂ.0.70 ಲಕ್ಷ ಅನುದಾನ ಒದಗಿಸಲಾಗಿದ್ದು, ಮುಂದೆಯೂ ಸಹ ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕು ಪುರದ ಅಣೆಯಿಂದ ಚಂಡೂರು ಗ್ರಾಮದವರಿಗೆ

1245 (1326) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ.(ನಾಣಯ್ಯ) ತುರುವೇಕೆರೆ : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಮಾಡದ ಅಣೆಯಿಂದ ಚಂದೂರು ಗ್ರಾಮಗಳಿಗೆ ಸುಮಾರು 700 ಎಕರೆ ಜಮೀನಿಗೆ ನೀರು ಹೋಗದೆ ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಗ್ರಾಮದ ರೈತರ ಬವಣೆ ನೀಗಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು;

ಇ) ಈ ಕೆಲಸವನ್ನು ಶೀಘ್ರದಲ್ಲಿ ಮಾಡಲಾಗುವುದೇ? ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬಂದಿದೆ. ಈ ಅಣೆ ಅಡಿಯಲ್ಲಿ 112 ಹೆಕ್ಟೇರ್ (277) ಎಕರೆ ಅಚ್ಚುಕಟ್ಟು ಇರುತ್ತದೆ. ಅಣೆಯಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಅವಲಂಬಿಸಿ ನಾಲೆಯ 3 ಕಿ.ಮೀ. ವರೆಗಿನ ಭಾಗದ ಅಚ್ಚುಕಟ್ಟಿಗೆ (ಸುಮಾರು 70 ಹೆಕ್ಟೇರ್) ನೀರನ್ನು ಒದಗಿಸಲಾಗಿದೆ.

ಆ) ಪ್ರಸ್ತುತ ಸಾಲಿನಲ್ಲಿ ಅನುದಾನ ರೂ. 50000-00 ಲಭ್ಯವಿದ್ದು ಅವಶ್ಯವಿರುವ ಕಾಲುವೆ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ತುರುವೇಕೆರೆ ನಗರದಲ್ಲಿ ದರೋಡೆ ತಪ್ಪಿಸುವುದು

1247 (1329) ಶ್ರೀ ಲಕ್ಷ್ಮೀನಾರಾಯಣ ,ಎಂ. ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ನಗರದಲ್ಲಿ ಒಂದು ವರ್ಷದಿಂದ ಈಚೆಗೆ ಇಪ್ಪತ್ತಕ್ಕೂ ಹೆಚ್ಚು ದರೋಡೆ ಆಗಿರುವ ಸಂಗತಿ ಗೊತ್ತಿದ್ದೂ ಸಹ ರಾತ್ರಿ ಹೊತ್ತು ಕೇವಲ ಒಬ್ಬೊಬ್ಬರು ಪೇದೆಗಳನ್ನು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?